ಸಂಬಂಧ ಗಟ್ಟಿ ಮಾಡಿದ್ದರು. ಮದುವೆಯಾದ ಮೇಲೆ ಲಕ್ಷ್ಮೀಬಾಯಿಯೂ ಒಳ್ಳೆಯ ಅಳಿಯನನ್ನು ನೋಡಿ ವಿಷಯ ಮರೆತು ಆನಂದಿಸಿದ್ದರು. ಈಗ ಅವರ ಪರಿಸ್ಥಿತಿ ನೋಡಿ ಸುಜಾತಳಿಗೆ ಎದೆ ತುಂಬಿ ಬಂದಿತ್ತು. ನಿಧಾನವಾಗಿ ತಡೆತಡೆದು ಮಾತನಾಡುತ್ತಿದ್ದವರೊಂದಿಗೆ ಕುಳಿತು ಕೈ ಹಿಡಿದುಕೊಂಡು ಅವರಿಗೆ ತೃಪ್ತಿಯಾಗುವವರೆಗೆ ಮಾತನಾಡಿದ್ದಾಯಿತು. ಆಗಲೇ ಗಿರೀಶನ ಫೋನ್ ಕೂಡ ಬಂದಿತ್ತು. "ಏನಂತೀ ಸುಜಿ? ಹೆಂಗಿದ್ದೀ? ಬೆಂಗಳೂರಾಗ ಆರಾಮ ಇದ್ದೀಯಂತ... ಸಂಸಾರ ಛಂದ ಅದ ಅಂತ... ನಿಮ್ಮವ್ವ ಹೇಳ್ತಿರ್ತಾಳ. ಛೊಲೊ ಆತು ಬಿಡು. ನಾನೂ ಆರಾಮ ಇದ್ದೇನಿ. ಈ ಕ್ಷಣದಾಗ ಇದ್ದೇನಿ. ಮುಂದಿನ ಗಳಿಗ್ಯಾಗ ಏನಾಗ್ತದಂತ ಗೊತ್ತಿಲ್ಲ. ಯಾಕಂದ್ರ ನಾ ಈಗ ಕಾಶ್ಮೀರದಾಗ ಡ್ಯೂಟಿ ಮ್ಯಾಲಿದ್ದೇನಿ. ಇಲ್ಲಿನ ಪರಿಸ್ಥಿತಿ ಮಿನಿಟ ಮಿನಿಟಿಗೆ ಬದ್ಲಾಗ್ತಿರ್ತದ. ಖರೆ ಸುಂದರ ಪ್ರಕೃತಿ, ಛಂದ... ಛಂದ ಹುಡಿಗ್ಯಾರ್ನ ನೋಡಕೋತ ಮಜಾ ಮಾಡಕೋತ ಇದ್ದೇನಿ" ಎಂದು ದೊಡ್ಡದಾಗಿ ನಕ್ಕ. ಸ್ಮಿತಾ ಫೋನ್ ಕಸಿದುಕೊಂಡು, "ಬರೇ ಹುಡಿಗ್ಯಾರ್ನ ನೋಡಕೋತ ಕೂಡಬ್ಯಾಡ್ರಿ. ಹಿಂದಿಂದ ಗುಂಡು ಬಂದು ಬಡದೀತು" ಎಂದು ಕಾಲೆಳೆದಳು. ಅತ್ತಲಿಂದ ನಗುವಿನ ಉತ್ತರವೇ ದೊರಕಿತ್ತು. ಮಕ್ಕಳ ಶಾಲೆ, ಕಾಲೇಜುಗಳು ಸರಿಯಾಗಿ ಸಾಗಿದ್ದವು. ಸ್ಮಿತಾ ಪಾದರಸದಂತೆ ಎಲ್ಲವನ್ನೂ ನಿರ್ವಹಿಸುತ್ತ ಮಾವನ ಆರೋಗ್ಯವನ್ನೂ ಗಮನಿಸುತ್ತಿದ್ದಳು. ರಾತ್ರಿಯೆಲ್ಲ ಮನಸ್ಫೂರ್ತಿಯಾಗಿ ಹರಟೆ ಮರುದಿನ ರಾತ್ರಿಯ ರಾಣಿಚೆನ್ನಮ್ಮಾ ರೈಲಿಗೆ ಉಡುಗೊರೆಯ ಸಮೇತ ತಾನೇ ಹತ್ತಿಸಿದಳು. ಅಂತೂ ಪ್ರವಾಸ ಮುಗಿದು ಬೆಂಗಳೂರಿನತ್ತ ಮುಖ ಮಾಡಿದ್ದಾಯಿತು.

ಈ ಪ್ರವಾಸ ಅವಳಲ್ಲಿ ಅನೇಕ ಬದಲಾವಣೆಗಳನ್ನು ತಂದಿತ್ತು. ಹೊಸ ಯೋಚನೆಗಳನ್ನು ಹುಟ್ಟು ಹಾಕಿತ್ತು. ರೈಲಿನಲ್ಲಿ ಕಣ್ಣು ಮುಚ್ಚಿ ಮಲಗಿದ್ದರೂ ಮನದ ಕಣ್ತೆರೆದಿತ್ತು. ಕಾಶ್ಮೀರದಲ್ಲಿ ವೈರಿಗಳ ಗುಂಡಿಗೆ ಎದೆಯೊಡ್ಡಿ ನಿಂತ ಗಿರೀಶ ಸಾವಿಗೆ ಹೆದರುತ್ತಿಲ್ಲ. 'ಕುಳ್ಳು ವಗದಾಗೇದ' ಎಂದ ಕಾಕಾನಲ್ಲಿ ಅದೆಷ್ಟು ಜೀವನೋತ್ಸಾಹ. 'ನಿನ್ನ ಮಗಳ ಮದವಿಗೆ ಬರ್ತೇನಿ... ಕರಸು' ಎನ್ನುವಷ್ಟು ಹುರುಪು. ಸಾವಿನ ಬಾಗಿಲಲ್ಲಿ ಅದಕ್ಕೆ ಎದೆಯೊಡ್ಡಿ ನಿಂತವರು ಹೆದರುತ್ತಿಲ್ಲ. ತಾನು ಕನಸಿಗೆ ಹೆದರಿ ಬಾಳನ್ನೇ ನರಕವಾಗಿಸಿಕೊಂಡಿದ್ದೇನೆ. ತನ್ನಿಂದ ಮನೆಯಲ್ಲೂ ಉಳಿದವರಿಗೆ ನೆಮ್ಮದಿಯಿಲ್ಲ. ಪಾಪ... ಮಕ್ಕಳು ಕಂಗೆಟ್ಟಿದ್ದಾರೆ. ಸಂಜಯ... ತನ್ನನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಡಾಕ್ಟರು, ಹೋಮ, ಶಾಂತಿ, ಪೂಜೆ, ವ್ರತ ಯಾವುದಕ್ಕೂ ಬೇಡವೆನ್ನಲಿಲ್ಲ. ದುಡ್ಡಿಗೆ ಲೆಕ್ಕ ಹಾಕಲಿಲ್ಲ. ಬೋನಸ್ ಬೇರೆ ಒಂದು ಲಕ್ಷ ಬಂದಿತ್ತೆಂದು ಆರು ತಿಂಗಳ ಮೊದಲೇ ಹೇಳಿದ್ದಿತ್ತು. ಹಾಗೆ ನೋಡಿದರೆ ತಾವಿಬ್ಬರೂ ಸುಖವಾಗಿ ಮಲಗಿ ದಿನಗಳೇನು... ತಿಂಗಳುಗಳೇ ಕಳೆದಿರಬಹುದು. ಒಮ್ಮೆ, "ಯಾಕ್ರೀ... ನೀವು ನನ್ನ ಹತ್ತರನ ಬರೂದುಲ್ಲಾ?" ಎಂದು ಕೇಳಿದ್ದಿತ್ತು. "ಏನ ಬರ್ತಿ? ಮಾರಿ ತುಂಬ ಭಂಡಾರ, ಅಂಗಾರ, ಭಸ್ಮ ಎಲ್ಲಾ ಹಚಗೊಂಡು ಮಾರವ್ವನಂಗ ಮಾರಿ ಮಾಡಕೊಂಡು ಮಲಕೊಂಡಿರ್ತಿ. ನೋಡ್ಲಿಕ್ಕೆ ಅಂಜಿಕಿ ಬರ್ತದ" ಎಂದಿದ್ದ. ನೆನೆಸಿ ನಗು ಬಂತು. "ಪಾಪ... ನನ್ನ ಸಲವಾಗಿ ಹೈರಾಣಾಗಿ ಹೋಗ್ಯಾರ" ಎಂದು ಸಶಬ್ದವಾಗಿ ಹೇಳಿಕೊಂಡು ಮೊಬೈಲ್‌ನಿಂದ ಫೋನ್ ಮಾಡಿದಳು. "ಹಲೋ... ಹುಬ್ಬಳ್ಳಿ ಬಿಟ್ಟೇನಿ. ನಾಳೆ ಮುಂಜಾನೆ ಸ್ಟೇಷನ್ನಿಗೆ ಬರ್ರಿ. ಅಂಧಂಗ ಒಂದ ಲಕ್ಷ ಬೋನಸ್ ಬಂತು ಅಂದಿದ್ರೆಲಾ... ಏನ ಮಾಡಿದ್ರಿ?" ಎಂದು ಸಣ್ಣಗೆ ಕೇಳಿದಳು. "ಅಬಾಬಾಬಾ... ಈವತ್ತು ಕೇಳ್ತೀಯಲಾ. ಅಂದ್ರ ನೀ ಆರಾಮ ಆಗೀ ಅಂಧಂಗಾತು. ಪೂರಾ ಎಲ್ಲಾ ನಿನ್ನ ಕನಸಿಗೆ ಸುರದದ್ದಾತು" ಎಂದು ನಕ್ಕ. "ಹ್ಞಂ..." ಎಂದವಳು ನಕ್ಕರೂ ನೋವು ನೂರಾಗಿತ್ತು. ಈ ಕನಸಿನ ಗಲಾಟೆಯಿಲ್ಲದಿದ್ದರೆ ಮಕ್ಕಳ ವಿದ್ಯಾಭ್ಯಾಸಕ್ಕೋ... ಮಗಳ ಮದುವೆಗೋ ಇಡಬಹುದಾಗಿತ್ತು ಎನಿಸಿದ್ದು ಸುಳ್ಳಲ್ಲ. 'ಹೌದು... ಈಗ ಕನಸಿನ ಚಿಂತೆ ಬಿಟ್ಟು ಹೊಸದಾಗಿ ಜೀವಿಸಬೇಕು. ಕನಸಿಗೇ ಸೆಡ್ಡು ಹೊಡೆಯಬೇಕು. ಈ ಕ್ಷಣ ಚೆನ್ನಾಗಿದ್ದವರಿಗೂ ಮುಂದಿನ ಕ್ಷಣದ ಬಗ್ಗೆ ಗೊತ್ತಿಲ್ಲ. ಹಾಗಿದ್ದಮೇಲೆ ಏಕೆ ಹೆದರಬೇಕು?'